ಆಗಿದೆ. ಸಬ್ ಸ್ಟೇಷನ್ ಆಗದೆ ವೋಲ್ಟೇಜ್ ಜಾಸ್ತಿಯಾಗಿದೆ. ಸಚಿವರು ದಯಮಾಡಿ ಯಾವಾಗ ಸಬ್ ಡಿವಿಜನಲ್ ಆಫೀಸ್ ಮಾಡುತ್ತೀರಿ. ಈ ಸಮಸ್ಯೆನ್ನು ಯಾವಾಗ ನಿವಾರಿಸುತ್ತೀರಿ. ಜೋಡಣೆ ಯಾವಾಗ ಮಾಡುತ್ತೀರಿ ಎಂದು ತಮ್ಮ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಅತಿ ಶೀಘ್ರದಲ್ಲೇ ಇವರ ಸಮಸ್ಯೆಗಳೆಲ್ಲವನ್ನೂ ಕೂಡ ನಿವಾರಣೆ ಮಾಡುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಆಫೀಸರಿಂದ ಈ ಸಮಸ್ಯೆಯನ್ನು ನಿವಾರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಅವರ ಟೈಂಗಿಂತ ಹೆಚ್ಚಿನ ಕೆಲಸ ಮಾಡಬೇಕಾಗುತ್ತದೆ. ಅವರನ್ನು ವರ್ಗಾವಣೆ ಮಾಡುವ ಎಂದರೆ ಬೇರೆಯವರು ಅಲ್ಲಿನ ಕೆಲಸ ಜಾಸ್ತಿ ಉಂಟು ಕೆಲಸ ನಮ್ಮಿಂದ ಮಾಡಲಿಕ್ಕಾಗುವುದಿಲ್ಲವೆಂದು ಯಾರೂ ಬರಲಿಕ್ಕೆ ಒಪ್ಪುವುದಿಲ್ಲ. ಕೂಡಲೇ ಮಾಡಬೇಕು. ಕೆಲಸವಾದರೆ ಮಾತ್ರ ಜನರಿಗೆ ಆ ಪ್ರಯೋಜನ ಸಿಗುತ್ತದೆ. ಸರಕಾರ ಒಂದೂವರೆ ಕೋಟಿ ಖರ್ಚು ಮಾಡಿ ಒಂದು ಸಬ್ ಸ್ಟೇಷನ್ ಮಾಡಿದರೆ ಅದರ ಪ್ರಯೋಜನ ಸಿಗುತ್ತದೆ. ಆ ಕಷ್ಟ ಪರಿಹಾರವಾಗುತ್ತದೆ. ಆದ್ದರಿಂದ ಕೂಡಲೇ ಮಾಡಬೇಕೆಂದು ವಿನಂತಿ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರ ಇಂಗಿತವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆ ಸಬ್ ಸ್ಟೇಷನ್ ಸಂಪೂರ್ಣ ಉಪಯೋಗ ಆ ಭಾಗದ ಜನರಿಗೆ ಆಗುವುದಕ್ಕೆ ಏನು ಬೇಕೋ ಅದೆಲ್ಲವನ್ನೂ ಆದಷ್ಟು ಕೂಡಲೇ ಮಾಡುತ್ತೇನೆ.

## ಮುಂದೂಡಲಾದ ಪ್ರಶ್ನೆಗಳು

**ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶೇಕಡಾ 20ರಷ್ಟು ಖರ್ಚು ಮಾಡುತ್ತಿರುವುದು.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 21 (281)

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರ್ಪೊರೇಷನ್ ಹಾಗೂ ನಗರ ಸಭೆ ಪುರ ಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಖರ್ಚು ಮಾಡಬೇಕಾಗಿರುವ ಶೇಕಡಾ 20ರ ಹಣವನ್ನು ಕ್ರಮಬದ್ಧವಾಗಿ ಮಾಡಲಾಗುತ್ತಿದೆಯೇ?

ಆ) ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ಗಳಲ್ಲಿ ಇತ್ತೀಚಿನ ಮೂರು ವರ್ಷಗಳಲ್ಲಿ ಖರ್ಚು ಮಾಡಬೇಕಾಗಿದ್ದ ಶೇಕಡಾ 20 ಹಣ ಎಷ್ಟು? ಪ್ರತ್ಯೇಕ ಮಾಹಿತಿ ನೀಡುವುದು?

ಇ) ಇದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ? ಶೇಕಡಾ 20ರ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸರಿಯಾಗಿ ಖರ್ಚು ಮಾಡದಿರಲು ಕಾರಣವೇನು?

ಶ್ರೀ ಸಿ. ಆರ್. ಸಗೀರ್ ಅಹಮ್ಮದ್ ( ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ) : ಅ) ಹೌದು.

ಆ) ಈ ಕೆಳಕಂಡ ಮಹಾನಗರ ಪಾಲಿಕೆಯಲ್ಲಿ ಇತ್ತೀಚಿನ 3 ವರ್ಷಗಳಲ್ಲಿ ಶೇಕಡಾ 18ರ ಅನುದಾನದಲ್ಲಿ, ಈ ಕೆಳಕಂಡಂತೆ ಮಂಜೂರಾಗಿದೆ.

**ಬೆಂಗಳೂರು ಮಹಾನಗರ ಪಾಲಿಕೆ**

| | |
|---|---|
| 1991-92 | ರೂ. 7,31,00,000 |
| 1992-93 | ರೂ. 9,42,19,000 |
| 1993-94 | ರೂ. 8,20,00,000 |

**ಮೈಸೂರು ಮಹಾನಗರ ಪಾಲಿಕೆ**

| | |
|---|---|
| 1991-92 | ರೂ. 58,50,000 |
| 1992-93 | ರೂ. 46,20,000 |
| 1993-94 | ರೂ. 63.00.000 |

**ಹುಬ್ಬಳ್ಳಿ : ಧಾರವಾಡ ಮಹಾನಗರ ಪಾಲಿಕೆ**

| | |
|---|---|
| 1991-92 | ರೂ. 1,05,35,000 |
| 1992-93 | ರೂ. 91,73,000 |
| 1993-94 | ರೂ. 91,37,700 |

**ನಗರ ಸಭೆ ಮತ್ತು ಪುರಸಭೆಗಳು**

| 1) ನಗರ ಸಭೆಗಳು | (ರೂ. ಲಕ್ಷಗಳಲ್ಲಿ) |
|---|---|
| 1991-92 | 235.08 |
| 1992-93 | 210.57 |
| 1993-94 | 244.16 |

2) ಪುರಸಭೆಗಳು (ರೂ. ಲಕ್ಷಗಳಲ್ಲಿ)

| | |
|---|---|
| 1991-92 | 182.56 |
| 1992-93 | 267.39 |
| 1993-94 | 316.16 |

೫) ಖರ್ಚು ಮಾಡಿದ ಹಣದ ವಿವರ

ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| 1991-92 | ರೂ. 5,44,91,729-35 |
| 1992-93 | ರೂ. 7,80,10,174-80 |
| 1993-94 | ರೂ. 6,37,81,451-65 |

ಮೈಸೂರು ಮಹಾನಗರಪಾಲಿಕೆ

| | |
|---|---|
| 1991-92 | ರೂ. 58,09,214-00 |
| 1992-93 | ರೂ. 63,06,968-00 |
| 1993-94 | ರೂ. 80,08,330-00 |

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

| | |
|---|---|
| 1991-92 | ರೂ. 35,69,640-00 |
| 1992-93 | ರೂ. 76,94,128-00 |
| 1993-94 | ರೂ. 77,00,727-00 |

ನಗರ ಸಭೆ ಮತ್ತು ಪುರ ಸಭೆಗಳು

| 1) ನಗರ ಸಭೆಗಳು | (ರೂ. ಲಕ್ಷಗಳಲ್ಲಿ) |
|---|---|
| 1991-92 | 159.92 |
| 1992-93 | 160.49 |
| 1993-94 | 137.80 |

| 2) ಪುರ ಸಭೆಗಳು | (ರೂ. ಲಕ್ಷಗಳಲ್ಲಿ) |
|---|---|
| 1991-92 | 111.05 |
| 1992-93 | 142.27 |
| 1993-94 | 144.46 |

ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿಯು ಸರಿಯಾಗಿಲ್ಲದಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಮೀಸಲಿಟ್ಟಿರುವ ಈ ಹಣವನ್ನು ವಿನಿಯೋಗಿಸಲು ಸಾಧ್ಯವಾಗುತ್ತಿಲ್ಲ.

ಶ್ರೀಮತಿ ಮೋಟಮ್ಮ : ಕಾರ್ಪೊರೇಷನ್ ಹಾಗೂ ನಗರ ಸಭೆಗಳಲ್ಲಿ ಶೇಕಡ 20ರಷ್ಟು ಹಣವನ್ನು ಏನು ಪರಿಶಿಷ್ಟ ಜಾತಿ ವರ್ಗದವರಿಗೆ ಖರ್ಚು ಮಾಡಬೇಕಾಗಿತ್ತು. ಅದು ಖರ್ಚು ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ ಹೌದೆಂದು ಹೇಳಿದ್ದಾರೆ. ಇದೊಂದು ರೀತಿ ನನಗೆ ಅಸಮಧಾನವೆನಿಸುತ್ತದೆ. ನಾನು 93ರಲ್ಲಿ ವಿಧಾನ ಮಂಡಲದ ಸಮಿತಿಯ ಅಧ್ಯಕ್ಷಳಾಗಿದ್ದಾಗ ಹಲವಾರು ಕಾರ್ಪೊರೇಷನ್‌ಗಳಿಗೆ ಭೇಟಿ ಕೊಟ್ಟಿದ್ದೇನೆ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಮತ್ತು ಮೈಸೂರಿನಲ್ಲಿ ವಿಚಾರ ಮಾಡಿದಾಗ 20 ಪರ್ಸೆಂಟ್ ಹಣವನ್ನು ಸರಿಯಾಗಿ ಖರ್ಚು ಮಾಡಿರಲಿಲ್ಲ. ಆ ವರ್ಷ ಸುಮಾರು 6 ಕೋಟಿ ಖರ್ಚು ಮಾಡಬೇಕಾಗಿತ್ತು. ಆದರೆ 2 ಕೋಟಿಯಷ್ಟೇ ಖರ್ಚು ಮಾಡಿದ್ದರು. ಮತ್ತು ಆ ಖರ್ಚು ಮಾಡಿದ ಹಣ ಕೂಡ ಸರಿಯಾಗಿ ಆ ಜನರಿಗೆ ತಲುಪದೆ ಅನುಕೂಲವಾಗುತ್ತಿಲ್ಲ. ಅವರಿಗೆ ಅನುಕೂಲವಾಗುವ ರೀತಿ ಕಾರ್ಯಕ್ರಮಗಳಿಗೆ ಖರ್ಚು ಮಾಡಿರಲಿಲ್ಲ. ಕೆಲವಾರು ಮುನಿಸಿಪಾಲಿಟಿ, ಪುರಸಭೆಗಳಲ್ಲೂ ಕೂಡ 20 ಪರ್ಸೆಂಟ್ ಹಣವನ್ನು ಈ ಜನರಿಗೆ ಖರ್ಚು ಮಾಡುತ್ತಿಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಆರ್ಥಿಕ ಸ್ಥಿತಿ ಉತ್ತಮ ಇರುವಂತಹ ನಗರಪಾಲಿಕೆಗಳಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಉತ್ತಮ ರೀತಿಯಲ್ಲಿ ಶೇಕಡಾ 18ರಷ್ಟರಲ್ಲಿ ಖರ್ಚು ಮಾಡಬೇಕಾದ ಹಣ ಖರ್ಚು ಮಾಡಿದ್ದೇವೆ. ಉಳಿದಿರುವಂತಹ ಹಣ ಖರ್ಚು ಮಾಡುವಂತಹ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಕೆಲವು ಪುರಸಭಾ, ನಗರಸಭೆಗಳಲ್ಲಿ ಈ ಯೋಜನೆ ಕುಂಠಿತವಾಗಿ ನಡೆಯುತ್ತಿದೆ. ಅನೇಕ ಪುರಸಭೆ, ನಗರಸಭೆಗಳಲ್ಲಿ ಆರ್ಥಿಕವಾಗಿ ಬಹಳ ದುರ್ಬಲವಿರುವಂಥಹವಾಗಿವೆ. ಇಂತಹ ಕಡೆಗಳಲ್ಲಿ ಶೇಕಡ 18ರಷ್ಟು ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಈ ಸರ್ಕಾರದ ಮತಿಯಿಂದ ಪದೇ ಪದೇ ನಾವು ಆದೇಶಗಳನ್ನು ಹೊರಡಿಸುವುದರ ಜೊತೆಗೆ ಈ ಹಣವನ್ನು ಖರ್ಚು ಮಾಡಬೇಕು ಎನ್ನುವುದರ ಬಗ್ಗೆ ಕಡ್ಡಾಯವಾಗಿ ಖರ್ಚು ಮಾಡುವಂತೆ ಆದೇಶಗಳನ್ನು ನಾವು ಹೊರಡಿಸಿದ್ದೇವೆ. ಆರ್ಥಿಕ ಸ್ಥಿತಿ ಕೆಲವು ಪುರಸಭೆಗಳದು ಉತ್ತಮವಾಗಿಲ್ಲದೇ ಇರುವುದರಿಂದ ಈ ಹಣವನ್ನು ಖರ್ಚು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಮುಂದಿನ

ದಿನಗಳಲ್ಲಿ ಇದಕ್ಕೆ ತಕ್ಕಂತೆ ಹಣವನ್ನು ಬಿಡುಗಡೆ ಮಾಡಿಸಿ ಈ ಶೇಕಡ 18 ರಷ್ಟು ಹಣವನ್ನು ಖರ್ಚು ಮಾಡುವಂತೆ ಆದೇಶವನ್ನು ಹೊರಡಿಸುವುದರ ಜೊತೆಗೆ ಯಾರು ಈ ಶೇಕಡ 18ರಲ್ಲಿ ಹಣವನ್ನು ಖರ್ಚು ಮಾಡುವುದಿಲ್ಲವೋ ಅಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸುವುದಕ್ಕೆ ನಾನು ಸಿದ್ಧವಾಗಿದ್ದೇನೆ ಎನ್ನುವ ಒಂದು ವಿಚಾರವನ್ನು ತಮ್ಮ ಮುಖಾಂತರವಾಗಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಹೇಳಿದ ಮಾತ್ರಕ್ಕೆ ಈ ಜನರಿಗೆ ಮೀಸಲಾಗಿಟ್ಟಿರುವ 20 ಪರ್‌ಸೆಂಟ್ ಹಣವನ್ನು ಖರ್ಚು ಮಾಡಬಾರದು ಎಂದೇನೂ ಇಲ್ಲ. ಮುನಿಸಿಪಾಲಿಟಿಯಲ್ಲಾಗಲೀ ಪುರಸಭೆಯಲ್ಲಾಗಲೀ ಆರ್ಥಿಕ ಪರಿಸ್ಥಿತಿ ಎಷ್ಟೇ ಕಷ್ಟವಾಗಿದ್ದರೂ ಸಹಾ ಈ ಜನರಿಗಾಗಿ ಹಣ ಖರ್ಚು ಮಾಡುವುದಕ್ಕೆ ಒಂದು ಆಕ್ಷನ್ ಪ್ಲಾನ್ ಮಾಡಿಯೇ ಮಾಡುತ್ತಾರೆ. ಎಷ್ಟು ಹಣ ಇತ್ತು ಎಂದು ಆ ವರ್ಷದ ಆದಾಯದ ಮೇಲೆ ಮಾಡುತ್ತಾರೆ. ಅದರಲ್ಲಿ ಅವರು 20 ಪರ್‌ಸೆಂಟ್ ಖರ್ಚು ಮಾಡಲೇಬೇಕು. ಅಂದರೆ ಈ ಹಣ ಕಂಪಲ್‌ಸರಿ. ಹಣದ ಕೊರತೆ ಇದೆ ಎಂದು ಹೇಳಿ 20 ಪರ್‌ಸೆಂಟ್ ಹಣವನ್ನು ಆ ಕೊರತೆ ನೀಗಿಸುವ ರೀತಿಯಲ್ಲಿ ಮಾಡುವುದು ಸರಿಯಲ್ಲ. ಅದಕ್ಕೆ ನೀವೇನು ಆದೇಶ ಕೊಡುತ್ತೀರಿ ಎನ್ನುವುದನ್ನು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಎಲ್ಲೆ ಈ ಒಂದು ನೆಪ ಹೇಳಿ 20 ಪರ್‌ಸೆಂಟ್ ಹಣವನ್ನು ಯಾವ ನಗರಸಭೆ ಮತ್ತು ಮುನಿಸಿಪಾಲಿಟಿಯಲ್ಲಿ ಖರ್ಚು ಮಾಡಿಲ್ಲ, ಅದನ್ನು ಮೊದಲು ನೀವು ತನಿಖೆ ಮಾಡಿ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಎರಡನೆಯದು, ಎಂದರೆ, ಮೈಸೂರು ಕಾರ್ಪೊರೇಷನ್‌ನ್ನು ನೋಡಿದಾಗ, ಈ 20 ಪರ್‌ಸೆಂಟ್ ಹಣವನ್ನು ನಿಜವಾಗಲೂ ಆ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯಕ್ರಮಕ್ಕೆ ಖರ್ಚು ಮಾಡಿಲ್ಲ ಎನ್ನುವುದು ಕಂಡು ಬರುತ್ತದೆ. ಅವರು ಬರಿಯಲ್ ಗ್ರೌಂಡ್ ರಿಪೇರಿಗೆ ಒಂದು ವರ್ಷದಲ್ಲಿ ಎರಡು ಲಕ್ಷ-ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದಕ್ಕಿಂತ ಉತ್ತಮವಾದ ಕೆಲಸ ಮಾಡಲಿಕ್ಕೆ ಸಾಕಷ್ಟು ಅವಕಾಶ ಇತ್ತು. ಇಂಥದ್ದಕ್ಕೆ ಅವರು ಖರ್ಚು ಮಾಡಿ ಆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಅನ್ಯಾಯ ಮಾಡುವುದು ಬೇಕಾಗಿಲ್ಲ. ಅವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕುಡಿಯುವ ನೀರು, ಶಾಲಾ ಕಟ್ಟಡಗಳು ಮತ್ತು ಹಾಸ್ಟೆಲ್ ಕಟ್ಟಡಗಳಿಗೆ ಈ ಹಣವನ್ನು ಉಪಯೋಗಿಸುವ ರೀತಿ ನೀವು ಆದೇಶ ನೀಡಬೇಕು. ಮತ್ತು ಯಾರು ಈ ನೆಪ ಹೇಳಿ ಹಣವನ್ನು ಖರ್ಚು ಮಾಡಿಲ್ಲ, ಅವರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ವರ್ಷದಲ್ಲಿ ಒಮ್ಮೆ ಬಜೆಟ್ ಮಾಡುವಂಥ ಸಂದರ್ಭದಲ್ಲಿ ಈ ಹಣವನ್ನು ಖರ್ಚು ಮಾಡುವಂಥ ಯೋಜನೆ ಎಲ್ಲಾ ನಗರಸಭೆ ಮತ್ತು ಪುರಸಭೆಗಳೂ ಅಳವಡಿಸಿಕೊಳ್ಳುತ್ತವೆ. ಆರ್ಥಿಕವಾಗಿ ಮುಂದುವರೆದಿರುವಂಥ ನಗರಸಭೆ ಮತ್ತು ಪುರಸಭೆಗಳಲ್ಲಿ ಉತ್ತಮವಾಗಿ ಕೆಲವು ಕೆಲಸಗಳನ್ನು ಮಾಡಿದ್ದಾರೆ. ಮೈಸೂರು ನಗರಪಾಲಿಕೆ ವಿಚಾರದಲ್ಲಿ ಬರಿಯಲ್ ಗ್ರೌಂಡ್‌ಗೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದು ಹೇಳುತ್ತಾರೆ. ಅದರ ಬಗ್ಗೆ ನಾನು ತನಿಖೆ ನಡೆಸುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಉದಾಹರಣೆಗಾಗಿ ಹೇಳುವುದಾದರೆ, ಮತ್ತೆ ಹಿಂದಿನ ವರ್ಷದಲ್ಲಿ ಉಳಿದಿರುವಂಥ ಹಣ ಮುಂದಿನ ವರ್ಷದಲ್ಲಿ ಕ್ಯಾರಿ ಓವರ್ ಮಾಡಿಕೊಂಡು ಆ ಹಣವನ್ನು ಖರ್ಚು ಮಾಡುವ ಬಗ್ಗೆ ಸರ್ಕಾರ ನಿರ್ಣಯ ಮಾಡಿದೆ. ಈ ಹಣವನ್ನು ಮುಂದಿನ ದಿನಗಳಲ್ಲಿ ನಾವು ಖರ್ಚು ಮಾಡುತ್ತೇವೆ ಎಂದು ಭರವಸೆಯನ್ನು ನಾನು ಕೊಡುವುದರ ಜೊತೆಗೆ ಇನ್ನು ಯಾವ ಯಾವ ಪುರಸಭೆಗಳಲ್ಲಿ ಈ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿಲ್ಲವೋ ಅವುಗಳ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಮುಖಾಂತರವಾಗಿ ಅವರಿಗೆ ಭರವಸೆಯನ್ನು ಕೊಡುತ್ತೇನೆ.

**ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.**

**ವಿಷಯ : ಗುಲ್ಬರ್ಗಾ ಸೂಪರ್ ಮಾರ್ಕೆಟ್ ಕಮಿಟಿಯವರು ಪಾವತಿ ಮಾಡಿರುವ ಹಣ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 135 ( 717)

ಶ್ರೀ ಕಮರಲ್ ಇಸ್ಲಾಂ (ಗುಲ್ಬರ್ಗಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೂಪರ್ ಮಾರ್ಕೆಟ್ ಕಮಿಟಿ, ಗುಲ್ಬರ್ಗಾದಿಂದ ಸಂಗ್ರಹಿಸಿದ ಹಣ ರೂ.98 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಯಿಂದ ಆ ಕ್ಷೇತ್ರದ ಅಭಿವೃದ್ದಿಗಾಗಿ ಬಳಸುವ ಬದಲು ಸರ್ಕಾರದ ಖಾತೆಗೆ ಜಮಾ ಆಗಿರುವುದು ನಿಜವೇ?

ಆ) ಸದರಿ ಮೊತ್ತವನ್ನು ಯಾವ ಉದ್ದೇಶ ಕ್ಕೋಸ್ಕರ ಸಂಗ್ರಹಿಸಲಾಗಿದೆಯೋ ಅದ್ದಕ್ಕೆ ಬಳಸದೇ ಇರಲು ಕಾರಣವೇನು?

ಇ) ಸದರಿ ಮೇಲ್ಕಾಣಿಸಿದ ಜಮೀನಿನ ಅಭಿವೃದ್ದಿ ಮತ್ತು ಗುಲ್ಬರ್ಗ ಜನತೆಗೆ ನಾಗರೀಕ ಸೌಲಭ್ಯತೆಗಾಗಿ ಈಗ ಸರ್ಕಾರವು ಅದೇ ಮೊತ್ತವನ್ನು ಗುಲ್ಬರ್ಗಾ ಕಾರ್ಪೋರೇಷನ್‌ಗೆ ಬಿಡುಗಡೆ ಮಾಡುವುದೇ?

ಅ) ಹೌದು

ಆ) ಸೈಟುಗಳ ಹರಾಜಿನಿಂದ ಬಂದ ಹಣ, ಹರಾಜಿನ ಬಗ್ಗೆ, ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಆ ಪ್ರಕರಣ ತೀರ್ಮಾನ ಆಗುವವರೆಗೆ ಹಣವನ್ನು ಖಜಾನೆಯಲ್ಲಿ ಇಡಲಾಗಿದೆ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯಃ ವಿರಿಜಾ ನಾಲೆಯ ಸೇತುವೆ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 138(519)

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ): ಮಾನ್ಯ ಉಪ ಮುಖ್ಯಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?